ಮತ್ತು ಕಾಡಂಚಿನ ತೋಟದಲ್ಲಿ ವಾಸಿಸುವ ಹಕ್ಕಿಗಳ ಸಂತತಿಯಲ್ಲಿಯೂ ಗಣನೀಯ ಕುಸಿತ ಕಂಡುಬಂದಿದೆ. ನಮ್ಮ ನೈಸರ್ಗಿಕ ಕಾಡುಗಳನ್ನು ಸಂರಕ್ಷಿಸುವ ತುರ್ತು ಅಗತ್ಯವಿದೆ. ಪಕ್ಷಿಗಳು ಜೀವಿಸಲು ಮತ್ತು ತಮ್ಮ ಸಂತತಿಯನ್ನು ಹೆಚ್ಚಿಸಲು ಆಹಾರ ಲಭ್ಯತೆಯು ಒಂದು ಪ್ರಮುಖ ಅಂಶ. ಆಹಾರದ ಆಧಾರದ ಮೇಲೆ ಹಕ್ಕಿಗಳನ್ನು ಮಾಂಸಾಹಾರಿಗಳು (ಹದ್ದು, ಗಿಡುಗ), ಮಕರಂದ ಹೀರುವ (ಸೂರಕ್ಕಿಗಳು), ಹಣ್ಣು ತಿನ್ನುವ (ಕುಟ್ರು ಹಕ್ಕಿಗಳು), ಕಾಳು ತಿನ್ನುವ (ರಾಟವಾಳಗಳು), ಕೀಟಾಹಾರಿ (ನೊಣ ಹಿಡುಕಗಳು), ಮಿಶ್ರಾಹಾರಿ (ಕಾಗೆ) ಗಳೆಂದು ವರ್ಗೀಕರಿಸಲಾಗಿದೆ. ಕೃಷಿಯಲ್ಲಿ ಯಥೇಚ್ಛವಾಗಿ ಬಳಕೆಯಾಗುತ್ತಿರುವ ಕೀಟನಾಶಕಗಳಿಂದ ಸತ್ತ ಕೀಟ ಮತ್ತು ಕಾಳುಗಳನ್ನು ತಿನ್ನುವ ಹಕ್ಕಿಗಳಿಗೆ ತೊಂದರೆಯಾಗಿದೆ. ಹಾಗೆಯೇ ಜಾನುವಾರುಗಳಲ್ಲಿ ಬಳಸುವ ಡೈಕ್ಲೋಫೆನಾಕ್ ಎಂಬ ನೋವುನಿವಾರಕ ಔಷಧಿಯುಕ್ತ ಮಾಂಸ ತಿನ್ನುವ ಹದ್ದುಗಳ ಸಂಖ್ಯೆ ಇಳಿಮುಖವಾಗಲು ಕಾರಣ ಎಂದು ವರದಿಯಲ್ಲಿ ತಿಳಿಸಲಾಗಿದೆ.

## ಹಕ್ಕಿಗಳ ಉಳಿವಿಗೆ ಕಾರ್ಯಯೋಜನೆ

ಭಾರತದ ಪಕ್ಷಿ ಸಂಕುಲದ ಪ್ರಸ್ತುತ ಸ್ಥಿತಿಗತಿಗಳನ್ನು ವರದಿಯಲ್ಲಿ ತಿಳಿಸಿದ್ದರೂ ನಿರ್ದಿಷ್ಟ ಗುರಿಯೊಂದಿಗೆ ವ್ಯವಸ್ಥಿತವಾಗಿ, ನಿಗದಿತ ಸಮಯದಲ್ಲಿ ಹಕ್ಕಿ ಸಮೀಕ್ಷೆಯಾಗಬೇಕು. ಇದಕ್ಕಾಗಿ ವೈಜ್ಞಾನಿಕ ವಿಧಾನಗಳು ಲಭ್ಯ. ಅಲ್ಲದೆ ದೀರ್ಘಾವಧಿ ಯೋಜನೆಗಳು ಕಾರ್ಯರೂಪಕ್ಕೆ ಬರಬೇಕಾಗಿದೆ.

## ಏನಿದು ಇ-ಬರ್ಡ್?

ಅಮೆರಿಕದ ಕರ್ನಲ್ ವಿಶ್ವವಿದ್ಯಾಲಯದ ಪಕ್ಷಿಶಾಸ್ತ್ರ ಅಧ್ಯಯನ ವಿಭಾಗವು ‘ಇ–ಬರ್ಡ್’ ಜಾಲತಾಣ ನಿರ್ವಹಿಸುತ್ತಿದೆ. ಇದರಲ್ಲಿ ವಿಶ್ವದ ಎಲ್ಲಾ ಭಾಗಗಳಲ್ಲಿ ಕಾಣಸಿಗುವ ಹಕ್ಕಿಗಳ ಮಾಹಿತಿಯನ್ನು ಪಕ್ಷಿವೀಕ್ಷಕರು ದಾಖಲಿಸುತ್ತಾರೆ. ಯಾವ ಸ್ಥಳ, ದಿನಾಂಕ, ಸಮಯ, ಕಾಣಿಸಿದ ಪಕ್ಷಿ ಮತ್ತು ಅವುಗಳ ಸಂಖ್ಯೆಯನ್ನು ನಮೂದಿಸಲು ಅವಕಾಶವಿದೆ. ವಿಶ್ವದ ಯಾವುದೇ ಪ್ರದೇಶದ ಪಕ್ಷಿ ವೈವಿಧ್ಯವನ್ನು ತಿಳಿದುಕೊಳ್ಳಲು/ದಾಖಲಿಸಲು ಸಾಧ್ಯವಾಗುತ್ತದೆ. ಆ ಪ್ರದೇಶದ ಪಕ್ಷಿತಜ್ಞರು ಅದರಲ್ಲಿರುವ ಮಾಹಿತಿಯನ್ನು ಪರಿಶೀಲಿಸಿ ಅನುಮೋದಿಸುತ್ತಾರೆ. ಹಕ್ಕಿಗಳ ಛಾಯಾಚಿತ್ರಗಳ ಜೊತೆ ಅವುಗಳನ್ನು ಗುರುತಿಸಲು ಅನುಕೂಲವಾಗುವ ಗುಣಲಕ್ಷಣಗಳನ್ನು ಸಹ ನೀಡಲಾಗಿದೆ. ಹಕ್ಕಿಗಳ ವರ್ಗೀಕರಣ, ಆವಾಸ ಸ್ಥಳಗಳು, ಆಹಾರ, ಕೂಗು, ವಲಸೆ, ವಿಸ್ತರಣೆ ಮತ್ತು ಸ್ಥಳೀಯತೆಯ ಮಾಹಿತಿಯೂ ಸಿಗುತ್ತದೆ. ಭಾರತದ ಪಕ್ಷಿ ವೈವಿಧ್ಯ ಸ್ಥಿತಿ ಗತಿಗಳ ವರದಿ 2023ನ್ನು ತಯಾರಿಸಲು ಇ–ಬರ್ಡ್ ತಾಣದಲ್ಲಿದ್ದ ಮೂರು ಕೋಟಿಗೂ ಹೆಚ್ಚು ಪರಿಶೀಲನಾ ಪಟ್ಟಿಯಲ್ಲಿರುವ ಮಾಹಿತಿಯನ್ನು ಬಳಸಲಾಗಿದೆ.

ಅರುಣಾಚಲ ಪ್ರದೇಶದಲ್ಲಿ ಮಂಗಟ್ಟೆ ಹಕ್ಕಿಗಳ ಗೂಡು ಮತ್ತು ಸಂತತಿಯನ್ನು ಸಂರಕ್ಷಿಸುವ ಯೋಜನೆ 2016ರಿಂದ ಜಾರಿಯಲ್ಲಿದೆ. ಕಳೆದ ಏಳು ವರ್ಷಗಳಲ್ಲಿ ಒಂದು ಸಾವಿರ ಕಿ.ಮೀ.ಗೂ ಹೆಚ್ಚು ಪ್ರದೇಶವನ್ನು ನಡೆದು ಸಮೀಕ್ಷೆ ಮಾಡಲಾಗಿದೆ. ದಾಸ ಮಂಗಟ್ಟೆಯ ಸಂಖ್ಯೆಯಲ್ಲಿ ಸ್ಥಿರತೆಯಿರುವುದನ್ನು ದಾಖಲಿಸಲಾಗಿದೆ.

ಕೇರಳದ ವೆಂಬನಾಡು ಅಳಿವೆಯಲ್ಲಿ ಸತತವಾಗಿ 2001ರಿಂದ 2023ರವರೆಗೆ ಜಲಪಕ್ಷಿಗಳ ಗಣತಿಕಾರ್ಯ ನಡೆದಿದೆ. ಜಲಪಕ್ಷಿಗಳ ಸಂಖ್ಯೆಯಲ್ಲಿ ಸತತ ಏರುಪೇರನ್ನು ಗುರುತಿಸಲಾಗಿದೆ. ಹಿಮಾಲಯದ ತಪ್ಪಲಿನ ಹಿಮಾಚಲ ಪ್ರದೇಶದ ‘ಸ್ಪಿಟಿ ಕಣಿವೆ’ಯಲ್ಲಿ 2002 ರಿಂದ 2023ರವರೆಗೆ ಹದ್ದುಗಳ ಗಣತಿಯನ್ನು ದಾಖಲಿಸಲಾಗಿದೆ. ಇದೇ ರೀತಿಯಲ್ಲಿ ಭಾರತದ ವಿವಿಧ ರಾಜ್ಯಗಳಲ್ಲಿ ವ್ಯವಸ್ಥಿತ ಕಾರ್ಯಯೋಜನೆಯ ಅಗತ್ಯವಿದೆ.

## ಕರ್ನಾಟಕದ ಪಕ್ಷಿವೈವಿಧ್ಯ

ಕರ್ನಾಟಕದಲ್ಲಿ ಪಶ್ಚಿಮಘಟ್ಟದ ನಿತ್ಯಹರಿದ್ವರ್ಣ ಕಾಡುಗಳು, ಕುರುಚಲು ಕಾಡುಗಳು, ಹುಲ್ಲುಗಾವಲುಗಳು, ಕೆರೆ–ತೊರೆ–ನದಿಗಳು, ಅಳಿವೆಗಳು, ಅಣೆಕಟ್ಟುಗಳಿಂದಾದ ನದಿ ಹಿನ್ನೀರಿನ ಪ್ರದೇಶಗಳು, ಸಮುದ್ರ ತೀರಗಳನ್ನೊಳಗೊಂಡ ಹಕ್ಕಿಗಳ ಆವಾಸಸ್ಥಾನಗಳಿವೆ. ಸ್ಥಳೀಯ ಹಕ್ಕಿಗಳು ಮತ್ತು ವಲಸೆ ಹಕ್ಕಿಗಳಿಗೆ ಸಾಕಷ್ಟು ತಂಗುದಾಣಗಳು ಲಭ್ಯ. ಈಗ ಬಿಡುಗಡೆಗೊಂಡಿರುವ ವರದಿ ಪ್ರಕಾರ ಕರ್ನಾಟಕದಲ್ಲಿ ಒಟ್ಟು 452 ಪ್ರಭೇದದ ಪಕ್ಷಿಗಳನ್ನು


ಗುಡವಿ ಪಕ್ಷಿಧಾಮದಲ್ಲಿ ಆಹಾರ ತರುವ ಪೋಷಕರ ನಿರೀಕ್ಷೆಯಲ್ಲಿ ಹಾವಕ್ಕಿ ಮರಿಗಳು